**ಸಾಕ್ಷಿಗೆ ದಿನಾಂಕ:25-02-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. KLR ವಕೀಲರಿಂದ ::**

ನನ್ನ ತಂದೆ ಚಂದ್ರಪ್ಪ ರವರಿಗೆ ಒಟ್ಟು ಯಾವುದೇ ಅಣ್ಣತಮ್ಮಂದಿರು ಇರುವುದಿಲ್ಲ. ನನ್ನ ತಂದೆ ಚಂದ್ರವಪ್ಪ ರವರ ತಂದೆ ತಾಯಿ ಅಂದರೆ ನನ್ನ ಅಜ್ಜ ಅಜ್ಜಿಯ ಹೆಸರು ಗಿರಿಯಪ್ಪ ಹಾಗೂ ನಂಜಮ್ಮ/ನಂಜುಂಡಮ್ಮ ಆಗಿರುತ್ತದೆ. ನನ್ನ ಮುತ್ತಜ್ಜನ ಹೆಸರು ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ವಾದಿ ಹಾಕಿರುವ ವಂಶವೃಕ್ಷವನ್ನು ನಾನು ಓದಿರುವುದಿಲ್ಲ. ಆದರೆ ಅದರ ಬಗ್ಗೆ ನನ್ನ ವಕೀಲರ ಮುಖಾಂತರ ತಿಳಿದುಕೊಂಡಿರುತ್ತೇನೆ. ಸದರಿ ವಂಶವೃಕ್ಷದಲ್ಲಿ ತೋರಿಸಿರುವ ವಿಚಾರಗಳು ಸರಿ ಇರುತ್ತವೆ. ನಮ್ಮ ಕುಟುಂಬದಲ್ಲಿ ನಮ್ಮ ಅಜ್ಜನವರ ಕಡೆಯಿಂದ ಬಂದ ಎರಡುವರೆ-ಮೂರು ಎಕರೆ ಜಮೀನು ಇರುತ್ತದೆ. ಇನ್ನ ಉಳಿದ 5 ಎಕರೆ ಜಮೀನು ನನ್ನ ಅಜ್ಜಿ ನಂಜಮ್ಮ/ನಂಜುಂಡಮ್ಮ ಕಡೆಯಿಂದ ಬಂದಿರುತ್ತದೆ. ಆದರೆ ನನ್ನ ಅಜ್ಜಿ ಕಡೆಯಿಂದ ಬಂದಿರುವ ಆಸ್ತಿ ಪಿತ್ರಾರ್ಜಿತ ಆಸ್ತಿ ಆಗಿರುವುದಿಲ್ಲ. ಸದರಿ ನಂಜಮ್ಮ/ನಂಜುಂಡಮ್ಮ ರವರು ಜೀವಂತ ಇರುವಾಗ ಅವರ ಆಸ್ತಿಗಳಿಗೆ ಸಂಬಂಧಪಟ್ಟಂತೆ ಯಾವುದಾದರು ನೋಂದಾಯಿತ ದಾಖಲಾತಿಗಳನ್ನು ಮಾಡಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ನನ್ನ ತಂದೆಗೆ ನನ್ನ ಅಜ್ಜಿಯ ಆಸ್ತಿಯು ಪೌತಿ ಆಧಾರದಲ್ಲಿ ಬಂದಿರುತ್ತದೆ.

ನನ್ನ ತಂದೆಗೆ ಒಟ್ಟು 3 ಜನ ಗಂಡು ಮಕ್ಕಳು ಇದ್ದು ಮತ್ತು ನಾನು ಮಾತ್ರ ಹೆಣ್ಣು ಮಗಳು ಇರುತ್ತೇನೆ. ನನ್ನ ಅಣ್ಣತಮ್ಮಂದಿರ ಹೆಸರು ಓಂಕಾರಪ್ಪ, ನಂಜುಂಡಪ್ಪ ಮತ್ತು ಹಾಲಪ್ಪ ಆಗಿರುತ್ತದೆ. ನನ್ನ ತಂದೆ ಚಂದ್ರಪ್ಪ ರವರು ಈಗ ಜೀವಂತ ಇರುವುದಿಲ್ಲ. ಅವರು ಸುಮಾರು 5-6 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ನನ್ನ ತಂದೆ ಚಂದ್ರಪ್ಪ ರವರು ಜೀವಂತ ಇದ್ದ ಸಮಯದಲ್ಲಿ ನಮ್ಮ ಕುಟುಂಬದ ಎಲ್ಲಾ ಸದಸ್ಯರು ನಮ್ಮ ಕುಟುಂಬದ ಎಲ್ಲಾ ಆಸ್ತಿಗಳಲ್ಲಿ ಒಟ್ಟಿಗೆ ಸ್ವಾಧೀನ ಇದ್ದು ಅವುಗಳನ್ನು ಒಟ್ಟಿಗೆ ಅನುಭವಿಸುತ್ತಿದ್ದು ಸಾಗುವಳಿ ಮಾಡುತ್ತಿದ್ದೇವು ಎಂದರೆ ಸರಿ. ಸದರಿ ಆಸ್ತಿಯಿಂದ ಬರುತ್ತಿದ್ದ ಆದಾಯವನ್ನು ನಮ್ಮ ಕುಟುಂಬದ ಎಲ್ಲಾ ಸದಸ್ಯರು ಅನುಭವಿಸುತ್ತಿದ್ದೇವು ಎಂದರೆ ಸರಿ. ನಮ್ಮ ಬಳಿ ಇದ್ದ ಆಸ್ತಿಯನ್ನುಕುಟುಂಬದ ಆಸ್ತಿ

ಎಂದು ನಮ್ಮ ಕುಟುಂಬದ ಸದಸ್ಯರೆಲ್ಲರು ಭಾವಿಸಿದ್ದೆವು ಎಂದರೆ ಸರಿ. ನಮ್ಮ ಕುಟುಂಬದ ಆಸ್ತಿಗಳಲ್ಲಿ ಒಂದು ಜಮೀನಿನ ಭಾಗವನ್ನು ಕುಂಟಿನಮಡು ಗ್ರಾಮಸ್ಥರಿಗೆ ಮಾರಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಜಮೀನನ್ನು ನನ್ನ ತಂದೆ ಅವರು ಜೀವಂತ ಇರುವಾಗ ಮಾರಾಟ ಮಾಡಿರುತ್ತಾರೆ. ಸದರಿ ಮಾರಾಟದ ವ್ಯವಹಾರದಲ್ಲಿ ಯಾವುದೇ ಇತರೇ ಮಕ್ಕಳ ಪಾತ್ರ ಇರಲಿಲ್ಲ.

ಓಂಕಾರಪ್ಪ, ನಂಜುಂಡಪ್ಪ ಮತ್ತು ಹಾಲಪ್ಪ ನನ್ನ ಸಹೋದರರು ಎಂದರೆ ಸರಿ. 2 ನೇ ವಾದಿ ಯಾರೆಂದು ನನಗೆ ಗೊತ್ತಿಲ್ಲ. ಈಗ ಹೇಳಿದ ವ್ಯಕ್ತಿಗಳು ಮತ್ತು ನನ್ನ ತಂದೆ ಚಂದ್ರಪ್ಪ ರವರು ನಮ್ಮ ಕುಟುಂಬದ ಆಸ್ತಿಗಳಲ್ಲಿ ರುದ್ರಪ್ಪ ಎನ್ನುವವರಿಗೆ 3 ಎಕರೆ ಜಮೀನು, ನಂಜುಂಡಪ್ಪ ಎನ್ನುವವರಿಗೆ ಸ್ವಲ್ಪ ಜಮೀನು ಮಾರಿರುತ್ತಾರೆ. ಸದರಿ ಮಾರಾಟಕ್ಕೆ ಸಂಬಂಧಪಟ್ಟಂತೆ ನಮ್ಮ ಕುಟುಂಬದ ಸದಸ್ಯರೆಲ್ಲರು ಸಹ ಸಹಿ ಮಾಡಿರುತ್ತೇವೆ ಎಂದರೆ ಸರಿ. ಸದರಿ ಮಾರಾಟಗಳಿಗೆ ಸಂಬಂಧಪಟ್ಟ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಸದರಿ ಕ್ರಯಪತ್ರಗಳಲ್ಲಿ ಮಾರಾಟ ಮಾಡಿರುವ ಜಮೀನುಗಳು ಒಟ್ಟು ಕುಟುಂಬದ ಹಾಗೂ ಪಿತ್ರಾರ್ಜಿತ ಆಸ್ತಿಗಳು ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಕುಂಟಿನಮಡು ಅಣ್ಣೆ ಬಸಪ್ಪ ಎನ್ನುವವರಿಗೂ ಸಹ ನಮ್ಮ ಕುಟುಂಬದ ಸದಸ್ಯರೆಲ್ಲರೂ ಸೇರಿ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ನನ್ನ ತಂದೆ ಮಾತ್ರ ಮಾರಾಟ ಮಾಡಿರುತ್ತಾರೆ ಎಂದು ನುಡಿದಿರುತ್ತಾರೆ. ಸದರಿ ಮಾರಾಟಕ್ಕೆ ಸಂಬಂಧಪಟ್ಟ ಕ್ರಯಪತ್ರದಲ್ಲೂ ಸಹ ಸದರಿ ಆಸ್ತಿಯು ನಮ್ಮ ಒಟ್ಟು ಕುಟುಂಬದ ಹಾಗೂ ಪಿತ್ರಾರ್ಜಿತ ಆಸ್ತಿಗಳು ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕುಂಟಿನಮಡು ಅಣ್ಣೆ ಬಸಪ್ಪನಿಗೆ ಆ ರೀತಿ ಮಾರಾಟ ಮಾಡಿದ್ದರೂ ಸಹ ಜಮೀನಿನ ಸ್ವಾಧೀನವನ್ನು ನಮ್ಮ ಕುಟುಂಬಸ್ಥರೇ ಇಟ್ಟುಕೊಂಡಿದ್ದರು ಎಂದರೆ ಸಾಕ್ಷಿಯು ನನ್ನ ತಂದೆ ಅದರ ಸ್ವಾಧೀನವನ್ನು ಇಟ್ಟುಕೊಂಡಿದ್ದರು ಎಂದು ನುಡಿದಿರುತ್ತಾರೆ. ಸದರಿ ಜಮೀನನ್ನು ನಂತರದಲ್ಲಿ ನನ್ನ ತಂದೆ ಖರೀದಿ ಮಾಡಿರುತ್ತಾರೆ. ಸದರಿ ಕ್ರಯ ಪತ್ರದಲ್ಲೂ ಸಹ ಸದರಿ ಆಸ್ತಿಯ ಸ್ವಾಧೀನವು ನಮ್ಮ ಕುಟುಂಬದ ಸದಸ್ಯರ ಬಳಿ ಇರುತ್ತದೆ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿಯು ನಮ್ಮ ತಂದೆಯ ಸ್ವಾಧೀನದಲ್ಲಿ ಇರುತ್ತದೆ ಎಂದು ನುಡಿದಿರುತ್ತಾರೆ. ನನ್ನ ತಂದೆಗೆ ನಮ್ಮ ಕುಟುಂಬದ ಆಸ್ತಿಗಳಲ್ಲಿ ಬರುವ ಆದಾಯ ಬಿಟ್ಟು ಬೇರೆ ಆದಾಯ ಇರಲಿಲ್ಲ ಎಂದರೆ ಸರಿ. ನನ್ನ ತಂದೆಯವರು ನಮ್ಮ

ಕುಟುಂಬಕ್ಕೆ ಸೇರಿದ ಆಸ್ತಿಗಳನ್ನು ಒಟ್ಟು ಕುಟುಂಬದ ಆಸ್ತಿಗಳೆಂದು ಪರಿಗಣಿಸಿ ಎಲ್ಲಾ ವ್ಯವಹಾರಗಳನ್ನು ಮಾಡುತ್ತಿದ್ದರು ಎಂದರೆ ಸರಿ. ಕುಂಟಿನಮಡು ಅಣ್ಣೆ ಬಸಪ್ಪರವರಿಂದ ಜಮೀನನ್ನು ವಾಪಸ್ಸು ಖರೀದಿ ಮಾಡಲು ನಮ್ಮ ಒಟ್ಟು ಕುಟುಂಬದ ಆದಾಯವನ್ನು ಬಳಸಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ರೀತಿ ಒಟ್ಟು ಕುಟುಂಬದ ಆಸ್ತಿ ಆದಾಯದಿಂದ ವಾಪಸ್ಸು ಖರೀದಿ ಮಾಡಿದ ಕಾರಣ ಸದರಿ ಆಸ್ತಿಯನ್ನು ನಮ್ಮ ಒಟ್ಟು ಕುಟುಂಬದ ಆಸ್ತಿ ಎಂದು ನಾವೆಲ್ಲಾ ಸದಸ್ಯರು ತಿಳಿದುಕೊಂಡಿರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯವರು ನಮ್ಮ ಆಸ್ತಿಗಳಿಗೆ ಸಂಬಂಧಪಟ್ಟಂತೆ ಮಾಡಿರುವ ಯಾವುದೇ ವ್ಯವಹಾರವನ್ನು ನಾನು ಇವರೆಗೂ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಆಸ್ತಿಗಳ ಮಾರಾಟ ಹಾಗೂ ವಾಪಸ್ಸು ಖರೀದಿ ಮಾಡಿರುವ ವ್ಯವಹಾರಳೆಲ್ಲವು ಸಹ ನಮ್ಮ ಒಟ್ಟು ಕುಟುಂಬದ ಒಳತಿಗೋಸ್ಕರ ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಇದುವರೆಗೂ ನಮ್ಮ ಒಟ್ಟು ಕುಟುಬಂದಲ್ಲಿ ಯಾವುದೇ ವಿಭಾಗ ಆಗಿರುವುದಿಲ್ಲ.

ನಾನು ಯಾವ ದಿನಾಂಕ ಹಾಗೂ ಇಸವಿಯಲ್ಲಿ ಹುಟ್ಟಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ನನಗೆ ಸುಮಾರು 20-25 ವರ್ಷಗಳ ಹಿಂದೆ ಮದುವೆಯಾಗಿರುತ್ತದೆ. ನಾನು 8 ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುತ್ತದೆ.

ದಿಃ 01.09.2010 ರಲ್ಲಿ ನಮ್ಮ ಕುಟುಂಬದಲ್ಲಿ ಒಂದು ನೋಂದಾಯಿತ ವಿಭಾಗ ಪತ್ರವಾಗಿರುತ್ತದೆ ಎಂದರೆ ಸರಿ. ಸದರಿ ವಿಭಾಗ ಪತ್ರದಲ್ಲಿ ನಮ್ಮ ಕುಟುಂಬದ ಎಲ್ಲಾ ಸದಸ್ಯರೆಲ್ಲರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇವೆ ಎಂದರೆ ಸರಿ. ಸದರಿ ವಿಭಾಗ ಪತ್ರದ ಪೂರ್ವದಲ್ಲಿ ನನ್ನ ಅಣ್ಣ ಹಾಲಪ್ಪ ರವರಿಗೆ ಯಾವುದೇ ತಿಳುವಳಿಕೆಯನ್ನು ನಾವುಗಳು ನೀಡಿರುವುದಿಲ್ಲ. ದಿಃ 16.04.2013 ರಂದು ನಮ್ಮ ಕುಟುಂಬದಲ್ಲಿ ಮತ್ತೊಂದು ನೋಂದಾಯಿತ ವಿಭಾಗ ಪತ್ರವಾಗಿರುತ್ತದೆ ಎಂದರೆ ಸರಿ. ಸದರಿ ವಿಭಾಗ ಪತ್ರದ ಪೂರ್ವದಲ್ಲಿಯೂ ಸಹ ನನ್ನ ಅಣ್ಣ ಹಾಲಪ್ಪ ರವರಿಗೆ ಯಾವುದೇ ತಿಳುವಳಿಕೆಯನ್ನು ನಾವುಗಳು ನೀಡಿರುವುದಿಲ್ಲ. ನಮ್ಮ ಒಟ್ಟು ಕುಟುಂಬದ ಆಸ್ತಿಗಳಲ್ಲಿ ನನ್ನ ಅಣ್ಣ ಹಾಲಪ್ಪ ರವರಿಗೂ ಸಹ ಹಕ್ಕು ಇತ್ತು ಎಂದರೆ ಸರಿ. ನನ್ನ ಅಣ್ಣ ಹಾಲಪ್ಪ ರವರಿಗೆ ಮೋಸ ಮಾಡುವ ದುರುದ್ದೇಶದಿಂದ ಅವರು ಕಡೂರು ತಾಲ್ಲೂಕಿನ ಹುಲಿಕೆರೆ ಗ್ರಾಮದಲ್ಲಿ ವಾಸವಾಗಿರುವ ವಿಚಾರ ನಮಗೆ

ತಿಳಿದಿದ್ದರೂ ಸಹ ಅವರನ್ನು ಬಿಟ್ಟು ನಾವುಗಳು ಮೇಲೆ ಹೇಳಿದ ವಿಭಾಗ ಪತ್ರಗಳನ್ನು ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಅಣ್ಣ ಹಾಲಪ್ಪ ರವರ ಹೆಂಡತಿಯ ಊರು ಕಡೂರು ತಾಲ್ಲೂಕಿನ ಹುಲಿಕೆರೆ ಗ್ರಾಮ ಆಗಿರುತ್ತದೆ. ಹಾಲಪ್ಪ ರವರ ಹೆಂಡತಿ 1 ನೇ ವಾದಿ ಆಗಿರುತ್ತಾರೆ ಎಂದರೆ ಸರಿ. ಸದರಿ ಹಾಲಪ್ಪ ಹಾಗೂ 1 ನೇ ವಾದಿಗೆ ಎಷ್ಟು ಜನ ಮಕ್ಕಳಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಅಣ್ಣ ಹಾಲಪ್ಪ ರವರಿಗೆ ತಿಳಿಸದೇ 2 ವಿಭಾಗ ಪತ್ರವನ್ನು ಮೋಸದಿಂದ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಅಣ್ಣ ಹಾಲಪ್ಪ ಮೃತರಾದ ನಂತರ ಅವರ ಹೆಂಡತಿ ಹಾಗೂ ಮಗನಾದ ವಾದಿಗಳಿಗೆ ಹಕ್ಕು ಇರುತ್ತದೆ ಎಂದರೆ ಸರಿಯಲ್ಲ. ನನಗೆ ಸ್ವತಂತ್ರವಾದ ಯಾವುದೇ ಆದಾಯ ಇರುವುದಿಲ್ಲ ಎಂದರೆ ಸರಿ.

ನಮ್ಮ ಪಿಳ್ಳೇನಹಳ್ಳಿ ಗ್ರಾಮದಿಂದ ಹುಲಿಕೆರೆ ಗ್ರಾಮಕ್ಕೆ ಎಷ್ಟು ದೂರ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಎರಡು ಗ್ರಾಮಗಳು ಅಕ್ಕಪಕ್ಕದ ಗ್ರಾಮಗಳಾಗಿರುತ್ತದೆ ಎಂದರೆ ಸರಿ. ನನಗೆ ನನ್ನ ಅಣ್ಣ ಹಾಲಪ್ಪ ರವರ ಕುಟುಂಬದ ಬಗ್ಗೆ ಸಂಪೂರ್ಣವಾಗಿ ತಿಳಿದಿದ್ದರೂ ಸಹ ಇಲ್ಲ ಎಂದು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ರತ್ನಮ್ಮ ಎನ್ನುವವರಿಗೆ ಒಂದು ಆಸ್ತಿಯನ್ನು ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಸದರಿ ಆಸ್ತಿಯನ್ನು ಮಾರಾಟ ಮಾಡುವ ಪೂರ್ವದಲ್ಲಿ ನನ್ನ ಅಣ್ಣ ಹಾಲಪ್ಪ ಅಥವಾ ವಾದಿಗಳಿಗೆ ಯಾವುದೇ ತಿಳುವಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿ. ನಮ್ಮ ಕುಟುಂಬದಲ್ಲಿ ಉಳುಮೆಯನ್ನು ಮುಖ್ಯವಾಗಿ ನನ್ನ ಅಣ್ಣ ಹಾಲಪ್ಪ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಎಲ್ಲರೂ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಅವರಲ್ಲಿ ಟ್ರಾಕ್ಟರ್ ಅನ್ನು ಚಾಲನೆಯನ್ನು ಕೇವಲ ಹಾಲಪ್ಪ ರವರು ಮಾಡುತ್ತಿದ್ದರು ಎಂದರೆ ಸರಿ.

ಹಾಲಪ್ಪ ರವರು ಜೀವಂತ ಇರುತ್ತಾರೋ ಅಥವಾ ತೀರಿಕೊಂಡಿರುತ್ತಾರೋ ಎಂದು ನಾನು ಇವತ್ತಿನವರೆಗೂ ತಿಳಿದುಕೊಳ್ಳಲು ಪ್ರಯತ್ನ ಮಾಡಿರುವುದಿಲ್ಲ. ಹಾಲಪ್ಪನ ವಾರಸುದಾರರಾದ ವಾದಿಗಳಿಗೆ ಕುಟುಂಬದ ಆಸ್ತಿಗಳಲ್ಲಿ ಹಿಸ್ಸೆ ನೀಡುವುದನ್ನು ತಪ್ಪಿಸುವ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಆಸ್ತಿಗಳಲ್ಲಿ ನನಗೆ ಯಾವುದೇ ಸ್ವತಂತ್ರ ಹಕ್ಕು ಇರುವುದಿಲ್ಲ ಎಂದರೆ ಸರಿ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: